ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/11/ಉಗ್ರಾಣ/2020-21

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-01,ದಿನಾಂಕ:04-03-2021

ಪ್ರಕಟಣೆ

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ "ನಿರ್ದೇಶಿಕೆ-2021"ಅನ್ನು ಮುದ್ರಿಸಿ ಬೈಂಡ್ ಮಾಡಿ ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ: ಅನಧಿಕೃತ ಟಿಪ್ಪಣಿ ಸಂಖ್ಯೆ:DTE-ADMIOSTAT/5/2020-JD-DEPT TECH EDUCATION ದಿನಾಂಕ:03/03/2021.

-***-

ಉಲ್ಲೇಖಿತ ಟಿಪ್ಪಣಿಯಂತೆ ತಾಂತ್ರಿಕ ಶಿಕ್ಷಣ ಇಲಾಖೆಯ "ನಿರ್ದೇಶಿಕೆ-2021"ಅನ್ನು ಮುದ್ರಿಸಿ ಬೈಂಡ್ ಮಾಡಿ ಸರಬರಾಜು ಮಾಡುವ ಸಂಬಂಧ "ಅರ್ಹ ಸಂಸ್ಥೆಗಳಿಂದ"ಅಂದಾಜು ದರಪಟ್ಟಿಯನ್ನು ಆಹ್ವಾನಿಸಲಾಗಿದೆ ಇದಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

| Sl no | ITEMS | SPECIFICATION |
|---|---|---|
| 01 | ಫ್ರಂಟ್ | 1/16 ಡಮ್ಮಿ ಪೇಜ್ |
| 02 | ಪುಟಗಳು | 245+4 |
| 03 | ಪೇಪರ್ | ಮುಖಪುಟ 220 ಜಿ.ಎಸ್.ಎಂ ಹಾರ್ಡ್ ಪೇಪರ್ ಮತ್ತು ಬಹುವರ್ಣದಲ್ಲಿ ಮುದ್ರಣ ಹಾಗೂ ಲ್ಯಾಮಿನೇಷನ್ ಮಾಡುವುದು |
| 04 | ಒಳಪುಟ | 80 ಜಿ.ಎಸ್.ಎಂ |
| 05 | ಬೈಂಡಿಂಗ್ | ಪರ್ ಫೆಕ್ಟ್ ಬೈಂಡಿಂಗ್ |
| 06 | ಪ್ರತಿಗಳ ಸಂಖ್ಯೆ | **400** |

ಸದರಿ ಅಂದಾಜು ದರಪಟ್ಟಿಗಳನ್ನು ದಿ:18-03-2021 ಮಧ್ಯಾಹ್ನ 3:30 pm ರೊಳಗೆ ಮೊಹರು ಮಾಡಿದ ಲಕೋಟೆಯಲ್ಲಿ ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ, ಬೆಂಗಳೂರು-01 ಇವರ ಹೆಸರಿನಲ್ಲಿ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ದಿನಾಂಕದ ನಂತರ ಸಲ್ಲಿಸಲಾದ ಅಂದಾಜು ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಿದೆ.

<u>ದರಪಟ್ಟಿಯ ನಿಯಮ ನಿಬಂಧನೆಗಳು:-</u>

1. ಮೇಲ್ಕಂಡ ಐಟಂಗಳ ಸರಬರಾಜಿಗಾಗಿ ದರಪಟ್ಟಿ ಸಲ್ಲಿಸುವಂತಹ ಸರಬರಾಜುದಾರರ ದರ ಗರಿಷ್ಠ ಒಂದು ಲಕ್ಷದ ಮಿತಿಗೊಳಪಟ್ಟಿರುತ್ತದೆ.
2. ಮೇಲ್ಕಂಡ ಐಟಂಗಳ ಸರಬರಾಜಿಗಾಗಿ ದರಪಟ್ಟಿ ಸಲ್ಲಿಸುವಂತಹ ಸರಬರಾಜುದಾರರ ದರಪಟ್ಟಿಯು ಗರಿಷ್ಠ 01 ವರ್ಷದ ಅವಧಿಗೆ ಇರುತ್ತದೆ.
3. ಮುಖಪುಟ 220 ಜಿ.ಎಸ್.ಎಂ ಹಾರ್ಡ್ ಪೇಪರ್, ಒಳಪುಟ 80 ಜಿ.ಎಸ್.ಎಂ ಮತ್ತು ಬಹುವರ್ಣದಲ್ಲಿ ಮುದ್ರಣ ಹಾಗೂ ಲ್ಯಾಮಿನೇಷನ್ ಮಾಡುವುದನ್ನು ಜಂಟಿ ನಿರ್ದೇಶಕರು(ಆಡಳಿತ) ರವರಿಗೆ ತೋರಿಸಿ ಅನುಮೋದನೆ ಪಡೆದು ತಮ್ಮ ಸ್ವಂತ ಖರ್ಚಿನಲ್ಲಿ ಮುಖಪುಟ 220 ಜಿ.ಎಸ್.ಎಂ ಹಾರ್ಡ್ ಪೇಪರ್, ಒಳಪುಟ 80 ಜಿ.ಎಸ್.ಎಂ

ಮತ್ತು ಬಹುವರ್ಣದಲ್ಲಿ ಮುದ್ರಣ ಹಾಗೂ ಲ್ಯಾಮಿನೇಷನ್ ಮಾಡುವುದು ನಂತರ ಒಂದು ಪ್ರತ್ಯೇಕ ಬುಕ್ ಮಾಡಿ ಉಗ್ರಾಣಕ್ಕೆ ಸರಬರಾಜು ಮಾಡುವುದು..

4. ಮೇಲಿನಂತೆ ಮುಖಪುಟ 220 ಜಿ.ಎಸ್.ಎಂ ಹಾರ್ಡ್ ಪೇಪರ್, ಒಳಪುಟ 80 ಜಿ.ಎಸ್.ಎಂ ಮತ್ತು ಬಹುವರ್ಣದಲ್ಲಿ ಮುದ್ರಣ ಹಾಗೂ ಲ್ಯಾಮಿನೇಷನ್ ಗಳನ್ನು ಕೋರಿಕೆಯ ಮೇರೆಗೆ ಸರಬರಾಜು ಮಾಡಿದ ನಂತರ ಹಣ ಪಾವತಿಗಾಗಿ ಬಿಲ್ಲಿನ ನಾಲ್ಕು ಪ್ರತಿಗಳನ್ನು ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ವಿಳಾಸಕ್ಕೆ ಕಳುಹಿಸಿ ಕೊಡುವುದು
5. ಸರಬರಾಜು ಆದೇಶದಲ್ಲಿ ಸೂಚಿಸುವ ಪ್ರಮಾಣವನ್ನು ತಿಳಿಸಿದ 15 ದಿನದೊಳಗೆ ಸರಬರಾಜು ಮಾಡುವುದು. ಇಲ್ಲವಾದಲ್ಲಿ ದಂಡ ವಿಧಿಸಲಾಗುವುದು.
6. ಕಳಪೆ ಗುಣಮಟ್ಟದ "ನಿರ್ದೇಶಿಕೆ-2021"ಅನ್ನು ಸರಬರಾಜು ಮಾಡಿದ್ದಲ್ಲಿ ಅವುಗಳನ್ನು ತಿರಸ್ಕರಿಸಲಾಗುವುದು. ಅಲ್ಲದೇ ಈ ಸಂಬಂಧ ಉಂಟಾಗುವ ನಷ್ಟವನ್ನು ಹಾಗೂ ಇಲಾಖೆ ವಿಧಿಸಬಹುದಾದ ದಂಡವನ್ನು ಸಂಸ್ಥೆಯವರು ಭರಿಸುವ ಜವಾಬ್ದಾರಿ ಹೊಂದಿರುತ್ತಾರೆ. ತಿರಸ್ಕರಿಸಲಾದ ಕಳಪೆ ಗುಣಮಟ್ಟದ ಸಾಮಾಗ್ರಿಗಳನ್ನು ಸರಬರಾಜುದಾರರು ತಮ್ಮ ಸ್ವಂತ ಖರ್ಚಿನಲ್ಲಿ ಕೊಂಡ್ಯೊಯುವುದು.
7. ದರಪಟ್ಟಿ ಸಲ್ಲಿಸುವ ಅರ್ಹ ಸರಬರಾಜುದಾರರು ಜಿ.ಎಸ್.ಟಿ ಸಂಖ್ಯೆಯನ್ನು ಹಾಗೂ ಪಾನ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ.
8. ದರಪಟ್ಟಿ ಸಲ್ಲಿಸುವ ಅರ್ಹ ಸರಬರಾಜುದಾರರು ಕರ್ನಾಟಕ ರಾಜ್ಯ ಸರ್ಕಾರದ ಖಜಾನೆ ಇಲಾಖೆಯ ನಮೂನೆ-9 ನ್ನು
ಭರ್ತಿ ಮತ್ತು ಸಹಿ ಮಾಡಿ ದರಪಟ್ಟಿಯೊಂದಿಗೆ ಸಲ್ಲಿಸಲು ಸೂಚಿಸಲಾಗಿದೆ. (ನಮೂನೆ-9 ನ್ನು ಲಗತ್ತಿಸಿದೆ)
9. ಅನುದಾನದ ಲಭ್ಯತೆಯ ಅನುಸಾರ ಬಿಲ್ಲಿನ ಮೊತ್ತವನ್ನು ಸಂದಾಯ ಮಾಡಲಾಗುವುದು.
10. ಸರಬರಾಜಾದ "ನಿರ್ದೇಶಿಕೆ-2021"ಅನ್ನು ಪರಿಶೀಲಿಸಿ, ನಿರ್ಧಿಷ್ಟ ವಿವರಣೆ ಪ್ರಕಾರ (Specification) ಸರಬರಾಜು ಮಾಡಿರುತ್ತಾರೆ ಹಾಗೂ ಉತ್ತಮ ಗುಣಮಟ್ಟದಾಗಿರುತ್ತದೆ ಎಂದು, ಉಗ್ರಾಣ ವಿಭಾಗದ ಅಧಿಕಾರಿಯವರು
ದೃಢೀಕರಣ ನೀಡಿದ ನಂತರವೇ, ಬಿಲ್ಲಿನ ಮೊತ್ತವನ್ನು ನಿಯಮಾನುಸಾರ ಸಂದಾಯ ಮಾಡಲಾಗುವುದು.

ಜಂಟಿ ನಿರ್ದೇಶಕರು(ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು.

ಇವರಿಗೆ,

1. ಡಿಟಿಇ ವೆಬ್‌ಸೈಟ್ ಇ-ಗವರ್ನನ್ಸ್ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು -01.
ಪ್ರಕಟಿಸಿದ ಬಗ್ಗೆ ದಾಖಲೆ
2. ಸೂಚನಾ ಫಲಕ.